ಕಥೆ : ಎಂ. ಜಯಶ್ರೀ

ಚಿತ್ರ : ಶಂಕರ್


# ಚೆಂತನಾರ್

**1** ಚೆಂತನಾರ್ ಎಂಬ ಸೌದೆ ಕಡಿಯುವವನು ಚಿದಂಬರಂ ಬಳಿ ವಾಸಿಸುತ್ತಿದ್ದನು. ಅವನು ಕೆಳವರ್ಗದ ಕುಟುಂಬದಲ್ಲಿ ಜನಿಸಿದವನು. ಅವನು ಭಗವಾನ್ ಶಿವನ ದೊಡ್ಡ ಭಕ್ತನಾಗಿದ್ದನು.




ಪ್ರತಿದಿನವೂ ಅವನು ಸೌದೆ ಮಾರಿ ಬಂದ ಹಣದಿಂದ, ಒಬ್ಬ ಶಿವಭಕ್ತನಿಗೆ ರಾತ್ರಿಯೂಟ ಬಡಿಸುತ್ತಿದ್ದನು.

**2** ಒಂದು ದಿನ ಭಾರಿ ಮಳೆ ಬಂದಿತು.




**3**





**4** ಭಗವಾನ್ ನಟರಾಜನು ಜಗತ್ತಿಗೆ ಚೆಂತನಾರನ ಭಕ್ತಿಯನ್ನು ಪ್ರದರ್ಶಿಸಲು ಇಚ್ಛಿಸಿದನು. ತಾನೇ ಚೆಂತನಾರನ ಮನೆಗೆ ಶಿವಭಕ್ತನ ವೇಷದಲ್ಲಿ ಬಂದನು.

**5**



**6** ರಾತ್ರಿ ಊಟವಾದ ಮೇಲೆ, ಶಿವನ ವೇಷ ಧರಿಸಿದ ನಟರಾಜನೇ ಹೀಗೆ ನುಡಿದನು:




ಚೆಂತನಾರ್ ಉಳಿದಿರುವ ಅಂಬಲಿಯನ್ನು ಅತಿಥಿಗೆ ಕಟ್ಟಿಕೊಟ್ಟನು.

**7** ತಂಜಾವೂರಿನ ಚೋಳರಾಜನ ಮಗನಾದ ಕಂದರದಿತಾರ್ ಎನ್ನುವವನು ಶಿವನ ದೊಡ್ಡ ಭಕ್ತನಾಗಿದ್ದನು. ಅವನು ಚಿದಂಬರ ದೇವಾಲಯವನ್ನು ಚಿನ್ನದ ತಗಡಿನಿಂದ ಲೇಪನ ಮಾಡುವ ಕೆಲಸವನ್ನು ಕೈಗೆತ್ತಿಕೊಂಡನು. ಅವನು ಪ್ರತಿದಿನವೂ ಶ್ರದ್ಧೆಯಿಂದ ಶಿವನ ಪೂಜೆಯನ್ನು ಮಾಡುತ್ತಿದ್ದನು. ತಾನು ರಾಜಕುಮಾರನ ಪೂಜೆಯನ್ನು ಸ್ವೀಕರಿಸಿದ್ದೇನೆಂದು ಸೂಚಿಸಲು, ನಟರಾಜನು ಪೂಜೆಯಾದ ಮೇಲೆ, ತನ್ನ ಕಾಲ್ಗೆಜ್ಜೆಗಳನ್ನು ಅಲ್ಲಾಡಿಸಿ, ಶಬ್ದ ಮಾಡುತ್ತಿದ್ದನು. ಇದು ದಿನನಿತ್ಯದ ಪದ್ಧತಿಯಾಗಿತ್ತು.

**8** ಅಂದು ರಾಜಕುಮಾರನಿಗೆ ನಟರಾಜನ ಗೆಜ್ಜೆಗಳ ನಾದ ಕೇಳಿಸಲಿಲ್ಲ.




**9** ಅಂದು ರಾತ್ರಿ, ನಟರಾಜನು ರಾಜಕುಮಾರನ ಕನಸಿನಲ್ಲಿ ಪ್ರತ್ಯಕ್ಷನಾದನು.




**10** ಚಿದಂಬರಮ್ ದೇವಾಲಯದ ಪೂಜಾರಿಗಳು ಎಂದಿನಂತೆಯೇ ಗರ್ಭಮಂದಿರವನ್ನು ತೆಗೆದರು.





**11** ಪೂಜಾರಿಗಳೆಲ್ಲರೂ ರಾಜಕುಮಾರನ ಹತ್ತಿರ ಹೋದರು. ತಾವು ಕಂಡದ್ದನ್ನು ಅವನಿಗೆ ನಿವೇದಿಸಿಕೊಂಡರು. ಭಗವಂತನು ತನಗೆ ಹೇಳಿದ ಮಾತಿನ ಅರ್ಥವನ್ನು ರಾಜಕುಮಾರನು ಅರಿತುಕೊಂಡನು. ಚೆಂತನಾರ್ ಯಾರೆಂದು ಕಂಡುಹಿಡಿಯುವಂತೆ ತನ್ನ ಮಂತ್ರಿಗಳಿಗೆ ಆಜ್ಞೆ ಮಾಡಿದನು.

**12**




**13** ನಟರಾಜನ ರಥೋತ್ಸವ ನಡೆಯುತ್ತಿತ್ತು. ಚೆಂತನಾರ್ ಕೂಡ ಅದನ್ನು ನೋಡಲು ಬಂದಿದ್ದನು. ಭಗವಂತನ ವಿಗ್ರಹವನ್ನು ರಥದಲ್ಲಿ ಪ್ರತಿಷ್ಠಾಪಿಸಿ, ರಾಜಕುಮಾರನೂ ಸೇರಿ ಎಲ್ಲರೂ ಹಗ್ಗವನ್ನು ಎಳೆಯಲಾರಂಭಿಸಿದರು. ಆದರೆ ಮಳೆಯಿಂದ ಆದ ಕೆಸರಿನಲ್ಲಿ ರಥ ಸಿಕ್ಕಿಬಿದ್ದಿದ್ದರಿಂದ, ರಥದ ಗಾಲಿಗಳು ಮುಂದೆ ಸರಿಯುತ್ತಿರಲಿಲ್ಲ.

**14** ರಥವು ಮುಂದೆ ಸಾಗದಿರುವುದನ್ನು ನೋಡಿ, ರಾಜಕುಮಾರನು ಬಹಳ ವ್ಯಥೆಪಟ್ಟನು. ಆಗ ಆಕಾಶದಿಂದ ಭಗವಂತನ ವಾಣಿಯು ಕೇಳಿಬಂತು:




**15** ಶಿವನ ಅನುಗ್ರಹದಿಂದ, ಚೆಂತನಾರ್ ಒಂದು ಸುಂದರವಾದ ಸ್ತೋತ್ರವನ್ನು ರಚಿಸಿ ಹಾಡಿದ.




ಪರಮಾತ್ಮನ ಕೃಪೆಯಿಂದ ಚೆಂತನಾರ್ ಭಗವಾನ್ ಶಿವನನ್ನು ಕುರಿತು ಹದಿಮೂರು ಪದ್ಯಗಳನ್ನು ಹಾಡಿದನು. ಇದಾದ ಒಡನೆ, ರಥವು ಚಲಿಸಲಾರಂಭಿಸಿತು.

**16** ರಾಜ, ಪೂಜಾರಿಗಳು, ಭಕ್ತರು – ಎಲ್ಲರೂ ಚೆಂತನಾರನ ಪಾದಗಳಿಗೆ ಬಿದ್ದು, ಕೊಂಡಾಡಿದರು.

**17** ರಾಜಕುಮಾರನು ಅವನ ಕನಸಿನ ಬಗ್ಗೆ ಚೆಂತನಾರನಿಗೆ ಹೇಳಿದನು. ತನ್ನ ಅಂಬಲಿಯನ್ನು ಸೇವಿಸಿದ ಶಿವಭಕ್ತ, ಸಾಕ್ಷಾತ್ ಶಿವನೇ ಎಂದು ತಿಳಿದು ಚೆಂತನಾರನ ಹೃದಯ ಕರಗಿತು.



**18** ತಮಿಳುನಾಡಿನ ಶೈವಭಕ್ತರು ಹಾಡಿರುವ ಹನ್ನೆರಡು ಗಾಥೆಗಳಲ್ಲಿ, ಚೆಂತನಾರನ ಪದ್ಯಗಳನ್ನು ಒಂಬತ್ತನೆಯ ಗಾಥೆಯಲ್ಲಿ ಅಡಕಗೊಳಿಸಲಾಗಿದೆ.